# ಹೇಳಿಕೊಡಿ

ಬಿರಿಯುತ್ತವೆ ಒಣ ಬೀಜಗಳು
ಹನಿ ಮಳೆಗೆ
ತುಸು ಮಣ್ಣ ಕರುಣೆಗೆ
ಮತ್ತೆ ಮನುಷ್ಯರ ಮನಸ್ಸೇಕೆ ಅರಳುವುದಿಲ್ಲ
ಸಾವಿರ ಸಾವಿರ ಮಳೆಗಾಲಗಳು
ಮುಗಿದು ಹೋದರೂ?

ಅಬ್ಬರಿಸುತ್ತವೆ ಕೂಗು ಮಾರಿಗಳು
ಶತಮಾನದ ಹೀಚು ಮೊಗ್ಗೊಂದು
ರಕ್ತ ಕಕ್ಕುವ ಹಾಗೆ
ನರಳುತ್ತವೆ ಉಸಿರುಗಳು
ನಕ್ಷತ್ರಗಳ ಮೈ ತುಂಬ
ಮುಳ್ಳು ಚುಚ್ಚುವ ಹಾಗೆ



ಕೇಸರಿ ಹಸಿರು ಗೋದಾಮಿನ ತುಂಬೆಲ್ಲ
ಅಫೀಮಿನ ಕಮಟು ವಾಸನೆ
ಅಲ್ಲೊಂದು ಅತ್ಯಾಚಾರ, ಇಲ್ಲೊಂದು ಜೀವಂತ
ಸಮಾಧಿ, ಬಿರಿಯಾನಿ ಮಾರಿದ್ದಕ್ಕೆ
ಸಣ್ಣಗೆ ದುಪ್ಪಟ್ಟ ಅಲುಗಿದ್ದಕ್ಕೆ
ಕೊನೆಗೆ ಅಲ್ಲೆಲ್ಲೋ ಗೂಡಂಗಡಿಯಲಿ
ನಿಂತು ಸಣ್ಣಗೆ ಕನಸು ಕಂಡಿದ್ದಕ್ಕೆ
ಓಹ್, ಮಿಡಿವ ಕವಾಟಗಳ ತುಂಬೆಲ್ಲ
ಬರೀ ನಿಟ್ಟುಸಿರುಗಳ ಸಂತೆ
ಎಲ್ಲಿ ಬತ್ತಿತು ನೂರು ನದಿಯ ಜಿನುಗು
ಎಲ್ಲಿ ದಿಕ್ಕು ತಪ್ಪಿತು
ಭಾವ ಬೆಸುಗೆಯ ಸೊಬಗು
ಒಲವ ತೇವದಲಿ ಗೆರೆಗಳೆದ್ದವು ಹೇಗೆ
ಹಸಿ ಮಣ್ಣ ಕರುಣೆ ಬಿಕರಿಗೆ ನಿಂತದ್ದು ಹೇಗೆ

ಹೇಳಿ ಕೊಡಿ
ಹೂ, ಮರ, ಗಿಡ, ಬಳ್ಳಿಗಳೇ
ಯಾವ ಬೀಜ ಬಿತ್ತಬೇಕು ಮನದ
ಮರುಭೂಮಿಗೆ
ಯಾವ ನೀರ ಹನಿಸಬೇಕು
ತೇಗ ಗಂಧದ ನಲಿವು ನೇಹಕೆ
ಯಾವ ಗಾಳಿಯ ಹಿಡಿದಿಟ್ಟು
ಹೆಣೆಯಬೇಕು ಭಾವ ಬಾನಿನ ಕೌದಿ
ಹೇಳಿಕೊಡಿ
ಹೇಗೆ ಬೆಳಕು ಬಳಿಯಬೇಕು
ಕುದಿವ ನನ್ನೂರ ರಸ್ತೆಗಳಿಗೆ
ನುಗ್ಗಿ ಬರುವ ನೂರು ನಾಳೆಗಳಿಗೆ

● ದೀಪ್ತಿ ಭದ್ರಾವತಿ

ಕಲೆ: ಡಿ.ಕೆ. ರಮೇಶ್

